ಉಪಾಧ್ಯಕ್ಷರು :– ಆಯಿತು, ಕುಳಿತುಕೊಳ್ಳಿ.

ಉಪಾಧ್ಯಕ್ಷರು :– ಈಗ ಹೆಚ್. ಸಿ. ಬಾಲಕೃಷ್ಣರವರು
(ಸದಸ್ಯರು ಹಾಜರಿರಲಿಲ್ಲ)

ಉಪಾಧ್ಯಕ್ಷರು:– ಈಗ ಪ್ರಕಾಶ್ ಖಂಡ್ರೆಯವರು.
(ಸದಸ್ಯರು ಹಾಜರಿರಲಿಲ್ಲ)

ಉಪಾಧ್ಯಕ್ಷರು:– ಈ ಅಲ್ಲೋಡ್ ಹನುಮಂತಪ್ಪನವರು.

(ಅ) ವಿಷಯ:– ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿರುವ ನಾರಾಯಣಪುರ ಬಲದಂಡೆ ಕಾಲುವೆಗಳ ಕಾಮಗಾರಿಗಳಲ್ಲಿ ನಡೆದಿರುವ ಭ್ರಷ್ಟಾಚಾರ ಹಾಗೂ ಕಾಮಗಾರಿಯ ವಿಳಂಬದ ಬಗ್ಗೆ.

ಶ್ರೀ ಅಲ್ಲೋಡ್ ವೈ. ಹನುಮಂತಪ್ಪ (ದೇವದುರ್ಗ) : ಮಾನ್ಯ ಉಪಾಧ್ಯಕ್ಷರೆ, ನನ್ನ ಮತಕ್ಷೇತ್ರವಾದ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ, ಉಪ ಕಾಲುವೆ, ಉಪ ವಿತರಣಾ ಕಾಲುವೆಗಳು ಹಾಗೂ ಹೊಲ ಕಾಲುವೆಗಳಲ್ಲಿ ಸರ್ಕಾರದ ನಿಯಮಾವಳಿಗಳನ್ನು ಗಾಳಿಗೆ ತೂರಿ ಗುತ್ತಿಗೆದಾರರು ಮತ್ತು ಅಭಿಯಂತರರುಗಳು ಶಾಮೀಲಾಗಿ ತಮ್ಮ ಮನ ಬಂದಂತೆ ಕಾಮಗಾರಿಗಳನ್ನು ನಿರ್ಮಾಣ ಮಾಡಿದ್ದು, ಇದರಲ್ಲಿ ಭಾರೀ ಭ್ರಷ್ಟಾಚಾರ ನಡೆದಿರುವ ಬಗ್ಗೆ ಹಾಗೂ ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರ ಗಮನವನ್ನು ಸೆಳೆದು, ಅದಕ್ಕೆ ಸರ್ಕಾರದ ಉತ್ತರವನ್ನು ಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಬೃಹತ್, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು) (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ 2 ರಲ್ಲಿ ನಾರಾಯಣಪುರ ಬಲದಂಡೆ ಕಾಲುವೆ ನಿರ್ಮಾಣಗೊಳಿಸಲಾಗುತ್ತಿದ್ದು, ಸದರಿ ಕಾಲುವೆ ಸ್ಕೀಂ 'ಎ' ಅಡಿಯಲ್ಲಿ ಒಟ್ಟು ಉದ್ದ 95 ಕಿ.ಮೀ. ಆಗಿದ್ದು, ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ 12,000 ಹೆ. ಪ್ರದೇಶ ಹಾಗೂ ದೇವದುರ್ಗ ತಾಲ್ಲೂಕಿನ 72,000 ಹೆ. ಪ್ರದೇಶ ಹೀಗೆ ಒಟ್ಟು 84,000 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳು 1995–96ನೇ ಸಾಲಿನಲ್ಲಿ ಪ್ರಾರಂಭಗೊಂಡಿರುತ್ತದೆ. ಈಗಾಗಲೇ ಯೋಜನೆಯ ಮುಖ್ಯ ಕಾಲುವೆಯ 95 ಕಿ.ಮೀ. ಉದ್ದ ಹಾಗೂ ವಿತರಣಾ ಕಾಲುವೆ 1 ರಿಂದ 14 ರಡಿಯ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

2. ನಾರಾಯಣಪುರ ಬಲದಂಡೆ ಕಾಲುವೆಯ ಕಿ.ಮೀ. 42 ರಿಂದ ಹಾಗೂ ವಿತರಣಾ ಕಾಲುವೆ 9 ರಿಂದ 18 ರಡಿಯ ಕಾಮಗಾರಿಗಳು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮೇಲೆ ತಿಳಿಸಿರುವಂತೆ ಈಗಾಗಲೇ ಮುಖ್ಯ ಕಾಲುವೆಯ ಹಾಗೂ ವಿತರಣಾ ಕಾಲುವೆ 9 ರಿಂದ 14 ರಡಿಯ ಕಾಮಗಾರಿಗಳು ಪೂರ್ಣಗೊಂಡಿದ್ದು, ನೀರಾವರಿ ಸೌಲಭ್ಯ, ಸಹ ಕಲ್ಪಿಸಲಾಗಿದೆ. ವಿತರಣಾ ಕಾಲುವೆ 15, 16 ಹಾಗೂ 18 ರಡಿಯ ಉಪ ವಿತರಣಾ ಕಾಲುವೆ ಹಾಗೂ ಲ್ಯಾಟರಲ್ ಕಾಮಗಾರಿಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ. ಸದರಿ ಬಾಕಿ ಎಲ್ಲಾ ಕಾಮಗಾರಿಗಳನ್ನು ಮಾರ್ಚ್ 2006ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

3. ಸದರಿ ಯೋಜನೆಯ ಕಾಮಗಾರಿಗಳು ನಿಗಧಿತ ಸಮಯದಲ್ಲಿ ಪೂರ್ಣಗೊಳ್ಳದಿರುವುದಕ್ಕೆ ಕಾಮಗಾರಿಗಳ ನಿರ್ಮಾಣ ಹಂತದಲ್ಲಿ ತಾಂತ್ರಿಕ ಹಾಗೂ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಕೆಲವು ಮಾರ್ಪಾಡುಗಳ ಅಗತ್ಯತೆ, ಹಲವು ಹೆಚ್ಚುವರಿ ಸಿ.ಡಿ.ಗಳ ನಿರ್ಮಾಣ, ರೈತರಿಂದ ಉಂಟಾಗುವ ಅಡೆತಡೆ, ಮಳೆಗಾಲದ ಸಮಯದಲ್ಲಿ ಕಾಮಗಾರಿಗಳ ನಿರ್ವಹಣೆಯಲ್ಲಿ ಉಂಟಾಗುವ ವಿಳಂಬ ಇತ್ಯಾದಿಗಳು ಕಾರಣವಾಗಿರುತ್ತದೆ. ಕೆಲವು ಗುತ್ತಿಗೆದಾರರು ಕಾಮಗಾರಿಗಳ ನಿರ್ವಹಣೆಯಲ್ಲಿ ಉಂಟು ಮಾಡುವ ವಿಳಂಬವು ಯೋಜನೆಯ ವಿಳಂಬಕ್ಕೆ ಕಾರಣವಾಗಿರುತ್ತದೆ. ಅಲ್ಲದೆ, ಕಾಮಗಾರಿಯೊಂದರ ಗುತ್ತಿಗೆಯನ್ನು ರದ್ದುಪಡಿಸಿದ ಸಂದರ್ಭದಲ್ಲಿ ಗುತ್ತಿಗೆದಾರರು ಕಳೆದ ಒಂದು ಸಾಲಿನಿಂದ ಪುನಃ ಪುನಃ ನ್ಯಾಯಾಲಯದ ಮೊರೆ ಹೋಗಿದ್ದು, ಇದರಿಂದಾಗಿ ಬಾಕಿ ಕಾಮಗಾರಿಗಾಗಿ ಮರು ಟೆಂಡರ್ ಕರೆದು ಕಾಮಗಾರಿ ಕೈಗೆತ್ತಿಕೊಳ್ಳುವಲ್ಲಿ ವಿಳಂಬ ಉಂಟಾಗಿರುತ್ತದೆ.

4. ಈ ಹಿಂದೆ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 72 ರಿಂದ 95 ಹಾಗೂ ವಿತರಣಾ ಕಾಲುವೆ 9 ರಿಂದ 18 ರಡಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ಸರ್ಕಾರದ ಗಮನಕ್ಕೆ ಬಂದಾಗ ತನಿಖೆ ಮಾಡಲು ಸರ್ಕಾರವು ಡಿಸೆಂಬರ್ 2002ರಲ್ಲಿ ತ್ರಿಸದಸ್ಯರ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ತನಿಖೆಯನ್ನು ಜರುಗಿಸಿ ತನ್ನ ವರದಿಯಲ್ಲಿ ಕೆಲವು ಕಾಮಗಾರಿ ನಿರ್ವಹಣೆಯಲ್ಲಿ ಕಂಡುಬಂದಂತಹ ಸಣ್ಣ ಲೋಪದೋಷಗಳನ್ನು ಹಾಗೂ ನ್ಯೂನ್ಯತೆ/ದುರಸ್ಥಿ ಕೆಲಸಗಳನ್ನು ಕಾಮಗಾರಿಗಳನ್ನು ಅಂತಿಮಗೊಳಿಸುವ ಮುನ್ನವೇ ಸರಿಪಡಿಸಿಕೊಳ್ಳುವಂತೆ ಅಭಿಪ್ರಾಯಪಟ್ಟಿರುತ್ತದೆ. ಅಲ್ಲದೆ ಸಮಿತಿಯ ಕಾಮಗಾರಿಯ ನಿರ್ವಹಣೆಯಲ್ಲಿ ಹಣ ದುರುಪಯೋಗವಾಗಿರುವುದಿಲ್ಲ ಎಂದು ಸಹ ಅಭಿಪ್ರಾಯಪಟ್ಟಿರುತ್ತದೆ.

5. ನಾರಾಯಣಪುರ ಬಲದಂಡೆ ಕಾಲುವೆ ಅಡಿಯಲ್ಲಿ ನಿಗಧಿತ 84,000 ಹೆಕ್ಟೇರ್ ಪ್ರದೇಶ ಪೈಕಿ ಸುಮಾರು 70,000 ಹೆಕ್ಟೇರ್ ಪ್ರದೇಶದ ನೀರಾವರಿ ಸಾಮರ್ಥ್ಯ ಈಗಾಗಲೇ ಕಲ್ಪಿಸಲಾಗಿದ್ದು, ಯೋಜನೆಯ ಬಾಕಿ ಕಾಮಗಾರಿಗಳನ್ನು ಮಾರ್ಚ್ 2006ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಆರ್ಲೋಡ್ ವೈ. ಹನುಮಂತಪ್ಪ :– ಮಾನ್ಯ ಉಪಾಧ್ಯಕ್ಷರೇ, ಈಗ ಇಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳಿಂದ ಅಧಿಕಾರಿಗಳು ಓದಿಸಿದಂಥ ಉತ್ತರ, ಸತ್ಯಕ್ಕೆ ಬಹಳ ದೂರವಾದಂಥ ಉತ್ತರವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ, ಸರ್ಕಾರದ ಗಮನಕ್ಕೆ ಬಂದಿರುವಂಥ ಎಲ್ಲಾ ಮಾಹಿತಿಗಳು, ಪತ್ರಿಕೆಗಳಲ್ಲಿ ಬಂದಿತರಕ್ಕಂಥವುಗಳು, ಮತ್ತು ಅಧಿಕಾರಿಗಳು ಕೊಟ್ಟಿರತಕ್ಕಂಥ ಎಲ್ಲಾ ಮಾಹಿತಿಗಳೂ ಕೂಡ ನನ್ನ ಹತ್ತಿರ ಇವೆ. 84,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಆಗಬೇಕಾಗಿದ್ದುದರಲ್ಲಿ 70,000 ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸುವ ರೀತಿಯಲ್ಲಿ ತಯಾರು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಉಳಿದ 24,000 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರು ಕೊಡಬೇಕು ಎಂದು ಹೇಳುತ್ತಿದ್ದಾರೆ. ಇವತ್ತು ಎಷ್ಟು ಗ್ರಾಮಗಳಲ್ಲಿ ನೀರನ್ನು ಬಳಸಿಕೊಳ್ಳುತ್ತಿದ್ದಾರೆನ್ನುವುದನ್ನು ಹೇಳಲಿ. ನಮ್ಮ ಭಾಗದಲ್ಲಿ ಪತ್ರಿಕೆಗಳಲ್ಲಿ ಬಹಳ ದೊಡ್ಡ ರೀತಿಯಲ್ಲಿ ಈ ರೀತಿಯಲ್ಲಿ ಪ್ರಿಂಟ್ ಆಗಿದೆ. ಈ ಬಗ್ಗೆ ಸರ್ಕಾರದೊಂದಿಗೆ ನಾವು ಸಾಕಷ್ಟು ಸಲ ಚರ್ಚೆ ಮಾಡಿದ್ದೇವೆ. ಸಂಬಂಧಪಟ್ಟ ಕೃಷ್ಣಾ ಭಾಗ್ಯ ಜಲ ನಿಗಮದ ನಿರ್ದೇಶಕರ ಜೊತೆ ಕೂಡ ಚರ್ಚೆ ಮಾಡಿದ್ದೇವೆ. ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳ ಹತ್ತಿರ ಕೂಡ ಚರ್ಚೆ ಮಾಡಿದ್ದಾಗಿದೆ. ಆದರೆ, ನಾವು ಚರ್ಚೆ ಮಾಡಿರುವಂಥಾದ್ದಕ್ಕೆ ಯಾವ ಅರ್ಥವೂ ಕೂಡ ಇಲ್ಲದಂತಾಗಿದೆ,

ಅದಕ್ಕೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲದಂತಾಗಿದೆ. 22,000 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರುಣಿಸಿದ್ದಾರೆ ಎನ್ನುವುದಕ್ಕೆ ಸಂಬಂಧಪಟ್ಟ ಇಲಾಖೆಯವರೇ ಉತ್ತರ ಕೊಟ್ಟಿದ್ದಾರೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಆದರೆ, ಅಧಿಕಾರಿಗಳು ಈಗ ಈ ರೀತಿಯಲ್ಲಿ ಉತ್ತರವನ್ನು ತಯಾರು ಮಾಡಿ, ಅದನ್ನು ಸಚಿವರ ಮುಖಾಂತರ ಓದಿಸಿ ಈ ಸದನವನ್ನು ತಪ್ಪು ದಾರಿಗೆಳೆಯುವಂಥಾದ್ದು ಸರಿಯಾದಂಥ ಕ್ರಮವಲ್ಲ ಎಂದು ಹೇಳಲು ಬಯಸುತ್ತೇನೆ. ನನಗೆ ಅವರು ಉತ್ತರವನ್ನು ಹೇಳಲಿ, 2006ಕ್ಕೆ ಕೆನಾಲ್‌ನ್ನು ಮುಗಿಸಿಕೊಡುತ್ತೇವೆ ಎಂದು ಹೇಳಿದ್ದರೂ, 18, 15 ಮತ್ತು 17ನೇ ಡಿಸ್ಟ್ರಿಬ್ಯೂಟರಿ ಚಾನಲ್‌ಗಳು ಹಾಗೇ ಉಳಿದಿವೆ. ಅವುಗಳ ಉಪ ಕಾಲುವೆಗಳೂ ಕೂಡ ಹಾಗೇ ಉಳಿದಿವೆ. 2006 ಬರಲು ಇನ್ನು ಎಷ್ಟು ತಿಂಗಳುಗಳು ಉಳಿದಿವೆ? ನಾಲ್ಕು ತಿಂಗಳಲ್ಲಿ ಇಷ್ಟೆಲ್ಲಾ ಮುಗಿಸಲು ಆಗುತ್ತದೆಯೇ? ಕೆನಾಲ್‌ನ್ನು ಮುಗಿಸಲು ಕೊಟ್ಟಿರತಕ್ಕಂಥ ಟೈಂ ಎಷ್ಟು? 2003–04ಕ್ಕೆ ಟೋಟಲ್ ಕೆನಾಲ್‌ನ್ನು ಮುಗಿಸಿಕೊಡುತ್ತೇವೆ ಎಂದು ಹೇಳಿದ್ದರೂ, ಇದುವರೆಗೂ ಆಗಿಲ್ಲ. ಇದುವರೆಗೂ ಇವರು ಮಾಡುತ್ತೇವೆ ಎಂದೇ ಉತ್ತರ ಹೇಳಿಕೊಂಡು ಬಂದರೆ ಜನಗಳಿಗೆ ನಾವೇನು ಉತ್ತರ ಹೇಳಬೇಕು? ಈ ರೀತಿಯಾಗಿ ತಪ್ಪು ಉತ್ತರವನ್ನು ಹೇಳತಕ್ಕಂಥಾದ್ದು ಸರಿಯಲ್ಲ. ಇದರಲ್ಲಿ ಬಹಳ ದೊಡ್ಡ ಭ್ರಷ್ಟಾಚಾರ ನಡೆದಿದೆ ಎಂದು ನಾನು ಹೇಳಿದ್ದೇನೆ.

ಉಪಾಧ್ಯಕ್ಷರು :– ಹನುಮಂತಪ್ಪನವರೇ, ಇದು ಭಾಷಣವಾಯಿತು. ನೀವು ಸ್ಪಷ್ಟೀಕರಣ ಕೇಳಿ. ಅದನ್ನು ಬಿಟ್ಟು ನೀವು ಭಾಷಣ ಮಾಡಲು ಹೋಗಬೇಡಿ. ಅಲ್ಲದೇ, ಸಂಬಂಧಪಟ್ಟ ಮಂತ್ರಿಗಳೂ ಇಲ್ಲಿ ಇಲ್ಲ ಈಗ.

ಶ್ರೀ ಆಲ್ಕೋಡ್ ವೈ. ಹನುಮಂತಪ್ಪ :– ಭಾಷಣವಲ್ಲ, ಉಪಾಧ್ಯಕ್ಷರೇ, ಪತ್ರಿಕೆಗಳಲ್ಲಿ ಬಂದಿರುವುದನ್ನು ತಮಗೆ ಕಳುಹಿಸಿಕೊಡುತ್ತೇನೆ. ಈ ರೀತಿಯಲ್ಲಿ ನನಗೆ ತಪ್ಪು ಮಾಹಿತಿ ಕೊಡತಕ್ಕಂಥಾದ್ದು ಸರಿಯಲ್ಲ. ಮತ್ತು ಸದನವನ್ನು ತಪ್ಪು ದಾರಿಗೆ ಎಳೆಯತಕ್ಕಂಥಾದ್ದೂ ಕೂಡ ಸರಿಯಲ್ಲ. ದೊಡ್ಡದೊಡ್ಡ ತಡೆಗೋಡೆಯನ್ನು ನಿರ್ಮಿಸಲು ಭೂಮಿಯ ವಿವಾದ ಇತ್ತು. ಅದಕ್ಕೆ ಭೂಮಿಯನ್ನು ಯಾರಿಂದ ಸ್ವಾಧೀನ ಪಡಿಸಿಕೊಂಡಿದ್ದರು, ಅವರಿಗೆ ಪರಿಹಾರವನ್ನು ಕೊಡಬೇಕು ಎನ್ನುವುದೂ ಆಗಿತ್ತು. ಆದರೆ ಇದುವರೆಗೂ ಆ ಭೂಮಿಗೆ ಪರಿಹಾರವನ್ನು ಕೊಟ್ಟಿಲ್ಲ. ಬಂಡ್ ತೆಗೆದಿರತಕ್ಕಂಥ ಸಂದರ್ಭದಲ್ಲಿ ಇವತ್ತಿಗೂ ಕೂಡ ಕೆನಾಲ್‌ಗೆ ನೀರು ಬಿಡಲು ಆ ಜನರು ತಯಾರಿಲ್ಲ. ಅದೂ ಪತ್ರಿಕೆಯಲ್ಲಿ ಬಂದಿದೆ, ಅದನ್ನೂ ಕೂಡ ತಮಗೆ ಕಳುಹಿಸಿಕೊಡುತ್ತೇನೆ.

ಉಪಾಧ್ಯಕ್ಷರು :– ನೀವು ಅವುಗಳನ್ನು ಕಳುಹಿಸಿಕೊಡಿ, ಈಗ ಕುಳಿತುಕೊಳ್ಳಿ. ಹನುಮಂತಪ್ಪನವರೇ, ಮುಂದೆ ಹೋಗೋಣವೇ?

ಶ್ರೀ ಆಲ್ಕೋಡ್ ವೈ. ಹನುಮಂತಪ್ಪ :– ನಾನು ಅವುಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಏಕೆಂದರೆ, ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಅಧಿಕಾರಿಗಳು ಕೊಟ್ಟಿರತಕ್ಕಂಥ ಮಾಹಿತಿ ನನ್ನ ಹತ್ತಿರ ಇದೆ. ಏಕೆಂದರೆ, ನನ್ನನ್ನು ಮತ್ತು ಸದನವನ್ನು ತಪ್ಪು ದಾರಿಗೆ ಎಳೆಯುವಂಥಾದ್ದು ಸರಿಯಲ್ಲ. ನನ್ನನ್ನು ಮತ್ತು ಸದನವನ್ನು ಏಕೆ ತಪ್ಪು ದಾರಿಗೆಳೆಯಬೇಕೆಂದು ಹೇಳುತ್ತೇನೆ. FIC ನವರು ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡುತ್ತೇವೆ ಎನ್ನುವುದಕ್ಕೆ ಸಿಗ್ನೇಚರ್ ಮಾಡಿದ್ದಾರೆ. ಅದರ ಮಾಹಿತಿಯನ್ನೂ ಕೂಡ ನಾನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ.

(ಮಾಹಿತಿಗಳನ್ನು ಉಪಾಧ್ಯಕ್ಷರಿಗೆ ಕಳುಹಿಸಿಕೊಟ್ಟರು)

ಉಪಾಧ್ಯಕ್ಷರು :– ಪೂರ್ತಿ ಫೈಲನ್ನೇ ಕಳುಹಿಸಿಬಿಡಿ.

ಶ್ರೀ ಆರ್ಕೋಡ್ ವೈ. ಹನುಮಂತಪ್ಪ :– 9ನೇ ವಿತರಣೆ ಕಾಲುವೆಯನ್ನು 6 ತಿಂಗಳಲ್ಲಿ ಮುಗಿಸುತ್ತೇವೆ ಎಂದರು. 15ನೇ ಡಿಸ್ಟ್ರಿಬ್ಯೂಟರಿಯಲ್ಲಿ 9ನೇ ಕಾಲುವೆ ಇನ್ನೂ ಮುಗಿದಿಲ್ಲ. 18ನೇ ಡಿಸ್ಟ್ರಿಬ್ಯೂಟರಿಯಲ್ಲಿ 6ನೇ ವಿತರಣೆ ಕಾಲುವೆ ಇನ್ನೂ ಮುಗಿದಿಲ್ಲ. 9 ಮತ್ತು 8ನೇ ಶಾಖಾ ಕೆನಾಲ್ ಕೂಡ ಮುಗಿಯಲಿಲ್ಲ. 15ರಲ್ಲಿ 18ನೇ ವಿತರಣೆ ಕಾಲುವೆ ಕೂಡ ಇನ್ನೂ ಮುಗಿಯಲಿಲ್ಲ. ಆಮೇಲೆ 18ನೇ ವಿತರಣೆ ಕಾಲುವೆ ಕೆಲಸ ಕೂಡ ಮುಗಿಯಲಿಲ್ಲ. 10ನೇ ಕಿ.ಮೀ.ನಲ್ಲಿ ಆ ಕಾಮಗಾರಿಗೆ 6 ಕೋಟಿ 63 ಲಕ್ಷ ರೂಪಾಯಿಗಳ ಟೆಂಡರ್ ಆಗಿದ್ದರೆ 9 ಕೋಟಿ 24 ಲಕ್ಷ ರೂಪಾಯಿಗಳನ್ನು ಅವರಿಗೆ ಕೊಡುತ್ತಾರೆ ಅಂದರೆ ಹೆಚ್ಚುವರಿಯಾಗಿ 3 ಕೋಟಿ ರೂಪಾಯಿಗಳನ್ನು ಗುತ್ತಿಗೆದಾರರಿಗೆ ಕೊಡುತ್ತಾರೆ. 3 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದರೂ ಸಹ canal ಕೆಲಸ ಮುಗಿದಿಲ್ಲ. ಇನ್ನೂ ಕೂಡ ಆ canal ಕೆಲಸ ಪ್ರಾರಂಭದ ಹಂತದಲ್ಲಿದೆ. ಇದನ್ನು ಯಾವಾಗ ಮುಗಿಸುತ್ತಾರೆ? ಹಾಗಾಗಿ ಈ ರೀತಿಯಲ್ಲಿ ನನಗೆ ತಪ್ಪು ಮಾಹಿತಿಯನ್ನು ಕೊಟ್ಟಿರುವುದು ಸರಿಯಾದ ಕ್ರಮವಾಗುವುದಿಲ್ಲ. ಇನ್ನೊಂದು ಕೊತ್ತುದೊಡ್ಡಿಯಲ್ಲಿ 84ನೇ ಕಿ.ಮೀ.ನಲ್ಲಿ 15ರೊಳಗೆ 95ನೇ ಕಿ.ಮೀಟರ್ ವರೆಗೆ ನೀರು ಕೊಡುತ್ತೇವೆಂದು ಹೇಳಿದ್ದರು. ಇವತ್ತೂ ಕೂಡ ಒಂದು ಹನಿ ನೀರು ಸಹ ಕೊಡಲಿಕ್ಕೆ ಆಗಲಿಲ್ಲ. canal ಕೆಲಸ ಮುಗಿದು ಮೂರೂವರೆ ವರ್ಷಗಳಾಗಿವೆ. ಇನ್ನೂ ಉಪ ಕಾಲುವೆಗಳು, ಹೊಲ ಕಾಲುವೆಗಳು ಮತ್ತು ವಿತರಣೆ ಕಾಲುವೆಗಳು ಏನೂ ಪ್ರಾರಂಭವಾಗಿಲ್ಲ. ಅದಕ್ಕೆ 2006ರೊಳಗಡೆ ಕೆಲಸ ಮುಗಿಸುತ್ತೇವೆ ಎನ್ನುವ ಮಾತನ್ನು ಸದನಕ್ಕೆ ಹೇಳತಕ್ಕಂಥದ್ದು ಸರಿಯಾದ ಮಾಹಿತಿ ಅಲ್ಲ ಎನ್ನುವ ಕಾರಣಕ್ಕಾಗಿ ಈ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ನಮ್ಮಲ್ಲಿ ಬಹಳ ದೊಡ್ಡ ಕಳಪೆ ಮಟ್ಟದ ಕಾಮಗಾರಿ ಆಗಿದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ, lateral ನಂಬರ್ 5 ರಲ್ಲಿ ಬಹಳ ಕಳಪೆ ಮಟ್ಟದ ಕಾಮಗಾರಿ ಆಗಿದೆಯೆಂದು ರೈತರು ಅದನ್ನು ಹೇಳುವುದಕ್ಕೆ ಹೋದಾಗ ರೈತರ ಮೇಲೆಯೇ ಗುತ್ತಿಗೆದಾರರೆಲ್ಲಾ ಕೇಸ್ ಮಾಡಿಸಿದರು. ಕಾಮಗಾರಿಗಳು ಬಹಳ ಕಳಪೆ ಮಟ್ಟದ್ದಾಗಿದೆ ಎಂದು ಹೇಳುವುದಕ್ಕೆ ಹೋದವರ ಮೇಲೆ ಗುತ್ತಿಗೆದಾರರು ಕೇಸ್ ಹಾಕುತ್ತಾರೆಂದರೆ ಹೇಗೆ? ಇದು ಎಷ್ಟರ ಮಟ್ಟಿಗೆ ಕಳಪೆ ಕಾಮಗಾರಿ ಆಗಿದೆ ಎನ್ನುವುದರ ಬಗ್ಗೆ ಫೋಟೋ ಸಮೇತವಾಗಿ ಇದನ್ನು ಪತ್ರಿಕೆಯಲ್ಲಿ ಕಳುಹಿಸಿಕೊಟ್ಟಿದ್ದಾರೆ. ಇದರ ಪ್ರತಿಯನ್ನು ಮಾನ್ಯ ಉಪಾಧ್ಯಕ್ಷರೆ ತಮಗೆ ಕಳುಹಿಸಿ ಕೊಡುತ್ತೇನೆ. ಈ ರೀತಿಯಲ್ಲಿ ಬಹಳ ದೊಡ್ಡ ನಿಟ್ಟಿನಲ್ಲಿ ಕಳಪೆ ಕಾಮಗಾರಿ ಆಗಿರತಕ್ಕಂಥದ್ದು ಈ ಕೆನಾಲ್ ಕೆಲಸವನ್ನು ಸರಿಯಾದ ರೀತಿಯಲ್ಲಿ ಯಾವಾಗ ಮುಗಿಸಿಕೊಡುತ್ತಾರೆ? ಈಗೆ ಏನು ಗುತ್ತಿಗೆ ನೀಡಿದ್ದಾರೆ, ಗುತ್ತಿಗೆದಾರರು ಮತ್ತು ಅಧಿಕಾರಿಗಳು ಶಾಮೀಲಾಗಿ ಇನ್ನೂ ಕಳಪೆ ಮಟ್ಟದ ಕಾಮಗಾರಿ ನಿರಂತರವಾಗಿ ನಡೆಯುತ್ತಿದೆ. ಬಹಳ ಒಳ್ಳೆಯ ಕೆಲಸ ಮಾಡತಕ್ಕಂಥವರನ್ನು ಇವತ್ತು ನಾವು ಗುರುತಿಸಿ ಹೇಳಬೇಕಾಗುತ್ತದೆ. ಉತ್ತಮ ಕೆಲಸ ಮಾಡತಕ್ಕಂಥ Executive Engineer ರವರನ್ನು ಗುತ್ತಿಗೆದಾರರೇ ಇಲ್ಲಿಗೆ ಬಂದುಬಿಟ್ಟು ವರ್ಗ ಮಾಡಿಸಿಬಿಟ್ಟರು. ಗುತ್ತಿಗೆದಾರರುಗಳು ತಮಗೆ ಬೇಕಾದಂಥ ಅಧಿಕಾರಿಗಳನ್ನು ಹಾಕಿಸಿಕೊಂಡು ಬರುತ್ತಾರೆ. ಹೀಗಾದರೆ ನಾವು ಹೇಗೆ ಒಳ್ಳೆಯ ಕೆಲಸವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯ? ಶ್ರೀ ಮಹಿಪಾಲ್ ರೆಡ್ಡಿ ಎನ್ನತಕ್ಕಂಥ ಒಳ್ಳೆಯ ಗುತ್ತಿಗೆದಾರರಿದ್ದರು. ಒಳ್ಳೆಯ, ಚೆನ್ನಾಗಿ ಕೆಲಸ ಮಾಡಿಸಕ್ಕಂಥ, ಉತ್ತಮವಾದ ಕೆಲಸವನ್ನು ಮಾಡಿಸುವಂಥ ಮನುಷ್ಯನನ್ನು ಬೆಳಗ್ಗೆ ಕಾಂಟ್ರಾಕ್ಟರುಗಳು ಇಲ್ಲಿ ಕುಳಿತುಕೊಂಡು ವರ್ಗ ಮಾಡಿಸಿಕೊಂಡು ಹೋದರು. ಮೊನ್ನೆ ನಾನು ನೋಡಿದ್ದೇನೆ. ಆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಹಾಗೆಯೇ ನಿಂತುಹೋಗಿದೆ. ನಾನು

ಸರ್ಕಾರದವರಲ್ಲಿ ಕೇಳುವುದೇನೆಂದರೆ, ಗುತ್ತಿಗೆದಾರರಿಗೋಸ್ಕರ ಕೆನಾಲ್‌ಗಳು ಆಗುತ್ತವೆಯೋ, ನೀರಾವರಿ ಆಗುತ್ತದೋ ಅಥವಾ ಜನರಿಗೋಸ್ಕರ ನೀರಾವರಿ ಆಗುತ್ತದೆಯೋ ಎನ್ನುವುದನ್ನು ಸರ್ಕಾರ ಹೇಳಬೇಕಾಗುತ್ತದೆ. ಕೇವಲ ಗುತ್ತಿಗೆದಾರರಿಗೋಸ್ಕರವೇ ಕೆನಾಲ್‌ಗಳು ಆಗುವುದಾದರೆ ಸರ್ಕಾರ ಒಂದು ನಿರ್ಣಯ ಮಾಡಲಿ. ಗುತ್ತಿಗೆದಾರರಿಗೋಸ್ಕರ ಆಗುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಮಾಡಿಕೊಂಡು ಹೋಗಲಿ. ಜನರ ಅನುಕೂಲಕ್ಕಾಗಿ ಏನಾದರೂ ಕೆನಾಲ್‌ಗಳು ಆಗುವುದಾದರೆ ಗುತ್ತಿಗೆದಾರರ ಮಾತು ಕೇಳಿ ವರ್ಗಾವಣೆ ಮಾಡಬಾರದೆಂದು ಹೇಳಬಯಸುತ್ತೇನೆ. ಮತ್ತೆ ನಾನು ಮಾನ್ಯ ನಿರ್ದೇಶಕರನ್ನು ಕರೆದುಕೊಂಡು ಹೋಗಿ....

(ಗೊಂದಲ)

ಉಪಾಧ್ಯಕ್ಷರು :– ಇದು ಗಮನ ಸೆಳೆಯುವ ಸೂಚನೆ. ನೀವು ಸ್ಪಷ್ಟೀಕರಣ ಕೇಳಬೇಕೇ ಹೊರತು ಗಂಟೆಗಟ್ಟಲೆ ಭಾಷಣ ಮಾಡಿದರೆ ಹೇಗೆ? ಇಲ್ಲಿ ಸಂಬಂಧಪಟ್ಟ ಇಲಾಖಾ ಮಂತ್ರಿಗಳು ಸಹ ಇಲ್ಲ. ಏಕೆ ಸುಮ್ಮನೆ ವಿಸ್ತಾರವಾಗಿ ಹೇಳುತ್ತೀರಿ? ಬೇಗ ಮುಗಿಸಿ.

(ಗೊಂದಲ)

ಶ್ರೀ ಸಿ. ಟಿ. ರವಿ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಸರ್ಕಾರದ ಮೇಲೆ chargesheet ಹಾಕುತ್ತಿದ್ದಾರೆ. ಇವರ ಸರ್ಕಾರದಲ್ಲಿ 6 ಕೋಟಿ ರೂಪಾಯಿಗಳಿಗೆ ಬದಲಾಗಿ 9 ಕೋಟಿ ರೂಪಾಯಿಗಳ ಬಿಲ್ ಮಾಡಿರುವುದು ಇತ್ಯಾದಿ ಬಗ್ಗೆ ಸರ್ಕಾರದ ಮೇಲೆ chargesheet ಹಾಕುತ್ತಿದ್ದಾರೆ.

ಉಪಾಧ್ಯಕ್ಷರು :– ಮಾನ್ಯ ರವಿಯವರೆ, ನೀವು ಕುಳಿತುಕೊಳ್ಳಿ. ಅವರು ಹೇಳಲಿ. ಮತ್ತೆ ಎತ್ತಿಕೊಡಬೇಡಿ. ನೀವು ಕುಳಿತುಕೊಳ್ಳಿ.

ಶ್ರೀ ಆಲ್ಕೋಡ್ ವೈ. ಹನುಮಂತಪ್ಪ :– ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಸರ್ಕಾರದಿಂದ ಉತ್ತರ ಬಯಸುವುದೇನೆಂದರೆ, ಮಾನ್ಯ ನಿರ್ದೇಶಕರೇ ನಮ್ಮ ಹತ್ತಿರ ಬಂದಿದ್ದರು. ನಿರ್ದೇಶಕರು ದೇವದುರ್ಗ ತಾಲ್ಲೂಕಿಗೆ ಬಂದು ಸ್ಥಳ ಪರಿಶೀಲನೆ ಮಾಡಿದರು. ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿಲ್ಲವೆಂದು ಛೀಮಾರಿ ಹಾಕಿದರೆಂದು ದೊಡ್ಡದಾದ ರೀತಿಯಲ್ಲಿ ಪತ್ರಿಕೆಯಲ್ಲಿ ಬಂತು. ಛೀಮಾರಿ ಹಾಕಿದರೂ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಛೀಮಾರಿ ಹಾಕಿದ ಮೇಲೆ ಏನು ಕ್ರಮ ತೆಗೆದುಕೊಂಡರು? ಯಾವನು ತಪ್ಪು ಮಾಡಿದ್ದ ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ 'ನೀವು ಉತ್ತಮವಾದ ಕೆಲಸ ಮಾಡಬೇಕೆಂದು' ನಾವು ಹೇಳಿದ ಮೇಲೆ, ಅವರು ಏನು ಹೇಳಿದರೆಂದರೆ, 'ಎಲ್ಲಾ ಇಂಜಿನಿಯರುಗಳು ನಾವು ಕೆಲಸಗಳನ್ನು ಮಾಡುವುದಕ್ಕೆ ಬಹಿಷ್ಕಾರ ಹಾಕುತ್ತೇವೆ, ರಾಜೀನಾಮೆ ಕೊಟ್ಟು ಹೋಗುತ್ತದೆಂದು' ನನಗೆ ಬೆದರಿಕೆ ಹಾಕಿದರು. ನಾವೆಲ್ಲಾ ಸಾಮೂಹಿಕ ರಾಜೀನಾಮೆ ಕೊಡುತ್ತೇವೆಂದು ನನಗೆ ಬೆದರಿಕೆ ಹಾಕಿದರು. ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಏನು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದನ್ನು ಮತ್ತು ಪತ್ರವನ್ನು ಹಚ್ಚಿ ಕಳುಹಿಸಿಕೊಟ್ಟೆ. ಇದುವರೆಗೂ ಅವರ ಮೇಲೆ ಏನೂ ಕ್ರಮ ಆಗಿಲ್ಲ. ಇನ್ನೊಂದು ವಿಷಯವನ್ನು ಹೇಳಿಬಿಡುತ್ತೇನೆ.

ಉಪಾಧ್ಯಕ್ಷರು :– ಮಾನ್ಯ ಹನುಮಂತಪ್ಪನವರೆ, ಎಷ್ಟು ಹೊತ್ತು ಮಾತನಾಡಬೇಕೆಂದಿದ್ದೀರಿ?

ಶ್ರೀ ಆಲ್ಕೋಡ್ ವೈ. ಹನುಮಂತಪ್ಪ :– ಮಾತನಾಡುವುದಲ್ಲ ಉಪಾಧ್ಯಕ್ಷರೆ, ಬೇಕಾದರೆ ಇದನ್ನು ಅವರು ಹೇಳಲಿ. ಇದು burning problem ಮಾನ್ಯ ಉಪಾಧ್ಯಕ್ಷರೆ,

ಈಗ ಏನಾಗಿದೆ ಎಂದರೆ, 48 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡಬೇಕಾಗಿರುವುದರಲ್ಲಿ 70 ಸಾವಿರ ಹೆಕ್ಟೇರ್ ಭೂಮಿಗೆ ನೀರಾವರಿ ಮಡುತ್ತೇವೆಂದು ಹೇಳಿದರೆ ಇನ್ನುಳಿದ ಸುಮಾರು 12 ರಿಂದ 14 ಸಾವಿರ ಹೆಕ್ಟೇರ್ ಪ್ರದೇಶವನ್ನು ಯಾವಾಗ ನೀರಾವರಿ ಮಾಡುತ್ತಾರೆ? ಬೇರೆ ಕಡೆಯಿಂದ ಸಾಲ ತಂದು ಕೆನಾಲ್ ಮಾಡುತ್ತಿದ್ದೇವೆ. ಕಂಟ್ರಾಕ್ಟರ್‌ಗಳಿಗೋಸ್ಕರ ಮಾಡುವುದಲ್ಲ ಮಾನ್ಯ ಉಪಾಧ್ಯಕ್ಷರೇ.

ಉಪಾಧ್ಯಕ್ಷರು :– ಮಾನ್ಯ ಹನುಮಂತಪ್ಪನವರೆ, ತಾವು ಮಾತನಾಡಿದ್ದು ಸಾಕು. ಕುಳಿತುಕೊಳ್ಳಿ. ಈಗ ಮಾನ್ಯ ಆರಗ ಜ್ಞಾನೇಂದ್ರರವರೆ, ತಾವು ಮಾತನಾಡಿ.

ಶ್ರೀ ಆಲ್ಕೋಡ್ ವೈ. ಹನುಮಂತಪ್ಪ :– ಮಾನ್ಯ ಉಪಾಧ್ಯಕ್ಷರೆ,..

ಉಪಾಧ್ಯಕ್ಷರು :– ಅವರು ಮಾತನಾಡುವುದು ರೆಕಾರ್ಡ್ ಆಗಬಾರದು. ಮಾನ್ಯ ಆರಗ ಜ್ಞಾನೇಂದ್ರರವರೆ, ತಾವು ಮಾತನಾಡಿ. ಸ್ಪಷ್ಟೀಕರಣ ಏನು ಕೇಳಬೇಕೊ ಅದನ್ನು ಕೇಳುವುದು ಬಿಟ್ಟು ಹೀಗೆ ಎಷ್ಟುಹೊತ್ತು ಮಾತನಾಡುವುದು? ಬೇಗ ಮುಗಿಸಿ ಎಂದು ಹೇಳಿದರೆ ಭಾಷಣ ಮಾಡುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ಆಲ್ಕೋಡ್ ವೈ. ಹನುಮಂತಪ್ಪ :– ಮಾನ್ಯ ಉಪಾಧ್ಯಕ್ಷರೆ, ಈಗ ಇರುವುದನ್ನೇ ಹೇಳುತ್ತೇನೆ. ರೆಕಾರ್ಡ್ ಮಾಡಿಸುವುದು ಬಿಡುವುದು ತಮಗೆ ಬಿಟ್ಟಿದ್ದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಉಪಾಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಅವರ ಕ್ಷೇತ್ರದಲ್ಲಿರುವ ಸಮಸ್ಯೆ ಬಗ್ಗೆ ಬಹಳ ಪ್ರಮುಖವಾಗಿ ಬಹಳ ವ್ಯಾಪಕವಾಗಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾನು ಮಾನ್ಯ ಜಲಸಂಪನ್ಮೂಲ ಸಚಿವರ ಪರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅವರು ಅಲ್ಲಿ ಏನೋ ಭ್ರಷ್ಟಾಚಾರ ನಡೆದಿದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದರ ಬಗ್ಗೆ 2002ಮೇ ಇಸವಿಯಲ್ಲಿ ರಚನೆಯಾಗಿರುವ ಸಮಿತಿ ಸಾಕಷ್ಟು ವಿಚಾರಣೆಯನ್ನು ಮಾಡಿ ಕೆಲವು ಮಾಹಿತಿಯನ್ನು ಸರ್ಕಾರದ ಜಲಸಂಪನ್ಮೂಲ ಇಲಾಖೆಗೆ ಕೊಟ್ಟಿದೆ. ಹಾಗೆಯೇ ಮಾನ್ಯ ಸದಸ್ಯರು ಹೇಳತಕ್ಕಂಥ ವಿಚಾರದಲ್ಲಿ ಸತ್ಯಾಂಶಗಳು ಸಹಿತ ಇರುತ್ತದೆ. ಅನೇಕ ಯೋಜನೆಗಳಲ್ಲಿ ಕಾಲುವೆಯನ್ನು ಮಾಡಿದಂಥ ಸಂದರ್ಭದಲ್ಲಿ ನಾವು ಸಹಿತ ನೋಡಿದ್ದೇವೆ. ಅನೇಕ ಸಲ ಸಂಶಯಗಳು ಸಹಿತ ಬರುತ್ತವೆ. ಇದೇನು ಗುತ್ತಿಗೆಗೋಸ್ಕರ ಮಾಡಿಬಿಡುತ್ತಾರಾ ಅನ್ನತಕ್ಕಂಥದ್ದು ಸಹಿತ ಬರುತ್ತದೆ. ಆ ರೀತಿ ಅವರಿಗೂ ಸಹಿತ ಸಂಶಯ ಬಂದಿರಲಿಕ್ಕೆ ಸಾಕು. ಆದರೆ ಇಷ್ಟು ಮಾತ್ರ ನಾನು ಹೇಳುತ್ತೇನೆ. ಮಾನ್ಯ ಜಲಸಂಪನ್ಮೂಲ ಇಲಾಖೆಯ ಸಚಿವರು ನಾವು ಕುಳಿತುಕೊಂಡು ಈ ಯೋಜನೆಯನ್ನು 2006 ಮಾರ್ಚ್ ಎಂಡ್‌ಗೆ ಮುಗಿಸಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಅವರಿಗೆ ಅವರ ಕ್ಷೇತ್ರದ ಬಗ್ಗೆ ಆ ಭಾಗದ ಬಗ್ಗೆ ಕಳಕಳಿ ಸ್ವಾಭಾವಿಕವಾಗಿ ಇರುವಂಥದ್ದು. ಅವರ ಎಲ್ಲಾ ಸಂಶಯಗಳನ್ನು ನಿವಾರಣೆ ಮಾಡುತ್ತೇವೆ ಮತ್ತು ಈ ಕಾಲುವೆಯ ಕೆಲಸಗಳನ್ನು 2006ರೊಳಗೆ ಕೊಟ್ಟು ಈ ತಾಲ್ಲೂಕಿನಲ್ಲಿ ಇನ್ನೇನು ಉಳಿದಿರತಕ್ಕಂಥ ಸುಮಾರು 14 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡಿಸತಕ್ಕಂಥದ್ದು ಇದೆ, ಅದನ್ನು ಖಂಡಿತವಾಗಿಯೂ ಸಹಿತ ಮಾರ್ಚ್ 2006ರೊಳಗಡೆ ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಆಲ್ಕೋಡ್ ವೈ. ಹನುಮಂತಪ್ಪ :– ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ವಿಷಯವನ್ನು ಹೇಳಿಬಿಡುತ್ತೇನೆ. ಉತ್ತರದಲ್ಲಿ ಅವರು ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ, ನಾವು ಪದೇ ಪದೇ ಅವರನ್ನು blacklist ಗೆ ಸೇರಿಸುವುದಾಗಲಿ, ಅವರ ಟೆಂಡರನ್ನು ರದ್ದುಪಡಿಸುವುದಾಗಲಿ

(ಗೊಂದಲ)

ಉಪಾಧ್ಯಕ್ಷರು :– ಮಾನ್ಯ ಹನುಮಂತಪ್ಪನವರೆ, ತಾವು ಕುಳಿತುಕೊಳ್ಳಿ. ಮಾನ್ಯ ಆರಗ ಜ್ಞಾನೇಂದ್ರವರೆ, ತಾವು ಮಾತನಾಡಿ.

(ಗೊಂದಲ)

ಶ್ರೀ ಆರ್ಕೋಡ್ ವೈ. ಹನುಮಂತಪ್ಪ :– ಒಂದು ವಿಷಯ ಹೇಳುತ್ತೇನೆ ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು :– ಇಲ್ಲ, ಇಲ್ಲ, ಆಗುವುದಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಆರ್ಕೋಡ್ ವೈ. ಹನುಮಂತಪ್ಪ :– ಮಾತನಾಡಬೇಡ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ ಉಪಾಧ್ಯಕ್ಷರೆ. ಒಂದು ವಿಷಯ ಹೇಳುತ್ತೇನೆ. ನಾನು ಬಂದಿರುವುದು ಅದಕ್ಕೆ ಮಾನ್ಯ ಉಪಾಧ್ಯಕ್ಷರೆ. ಕುಳಿತುಕೊಳ್ಳುವುದಕ್ಕಲ್ಲ.

(ಗೊಂದಲ)

ಉಪಾಧ್ಯಕ್ಷರು :– ಅವರು ಹೇಳಿದ್ದು ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಆರಗ ಜ್ಞಾನೇಂದ್ರರವರೆ, ತಾವು ಪ್ರಾರಂಭಮಾಡಿ. ಹನುಮಂತಪ್ಪನವರು ಹೇಳುತ್ತಿರುವುದು ರೆಕಾರ್ಡ್‌ಗೆ ಹೋಗಕೂಡದು.

(ಗೊಂದಲ)

ಶ್ರೀ ಆರ್ಕೋಡ್ ವೈ. ಹನುಮಂತಪ್ಪ :– ಮಾನ್ಯ ಉಪಾಧ್ಯಕ್ಷರೆ, ನಾವು ಸರ್ಕಾರದ ಬಗ್ಗೆ ಯಾವುದೂ ಮಾತನಾಡಬಾರದು ಎಂದು ತಾವು ನಿರ್ಣಯ ಹೇಳಿ. ನಾವು ಇಲ್ಲಿಂದ ಈಗಲೆ ಹೋಗಿಬಿಡುತ್ತೇವೆ. ಈ ಸದನದಲ್ಲಿ ನಾವು ಕುಳಿತುಕೊಳ್ಳುವುದಿಲ್ಲ. ಹತ್ತು ನಿಮಿಷ ಕೂಡ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಹೋಗಿಬಿಡುತ್ತೇವೆ. ಏಕೆಂದರೆ clarification ಕೇಳುವುದಕ್ಕೆ ಅವಕಾಶವಿಲ್ಲವೆಂದರೆ, ನಾವು ಇಲ್ಲಿಗೆ ಏಕೆ ಬರಬೆಕು?

ಉಪಾಧ್ಯಕ್ಷರು :– ಕ್ಲಾರಿಫಿಕೇಶನ್ ಕೇಳುವುದಕ್ಕೆ ಎರಡು ಗಂಟೆ ಸಮಯ ಬೇಕೇ? ಎರಡು ಗಂಟೆ ಮಾತನಾಡಬೇಕಾ?

(ಗೊಂದಲ)

ಶ್ರೀ ಆರ್ಕೋಡ್ ವೈ. ಹನುಮಂತಪ್ಪ :– ನಮ್ಮ ಕ್ಷೇತ್ರದಲ್ಲಿ ಸಮಸ್ಯೆಯಾಗಿದೆ ಅದಕ್ಕೆ ಇಲ್ಲಿ ಹೇಳುತ್ತೇವೆ. ಒಂದು ನಿಮಿಷ ಸಮಯಾವಕಾಶ ಕೊಡಿ ಎಂದು ಕೇಳಿದರೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಹೇಗೆ ಮಾನ್ಯ ಉಪಾಧ್ಯಕ್ಷರೆ?

ಉಪಾಧ್ಯಕ್ಷರು :– ಅದಕ್ಕೆ ಬೇರೆ ನಿಯಮಾವಳಿ ಅಡಿಯಲ್ಲಿ ಅವಕಾಶ ಕೇಳಿ. ಆಗ ಅರ್ಧ ಗಂಟೆಯಲ್ಲದಿದ್ದರೆ ಒಂದು ಗಂಟೆ ಚರ್ಚೆ ಮಾಡಿ. ಗಮನ ಸೆಳೆಯುವ ಸೂಚನೆಯಲ್ಲಿ ನೀವು ಒಂದು ಗಂಟೆ ಕಾಲ ಮಾತನಾಡಿದರೆ ಹೇಗೆ? ಬೇರೆಯವರಿಗೆ ಏನು ಉತ್ತರ ಕೊಡಲಿ ನಾನು?

(ಗೊಂದಲ)

ಶ್ರೀ ಆರ್ಕೋಡ್ ವೈ. ಹನುಮಂತಪ್ಪ :– ಒಂದ್ನಿನಿಮಿಷ ಮಾನ್ಯ ಉಪಾಧ್ಯಕ್ಷರೆ, ಟೆಂಡರ್ ಕೊಡುವಾಗ ನ್ಯಾಯಾಲಯಕ್ಕೆ ಹೋಗುತ್ತಾರೆ. ನ್ಯಾಯಾಲಯದ ಮೊರೆ ಹೋದಾಗ ಲೇಟ್ ಆಗುತ್ತದೆಂದರೆ ಅದು ಎಲ್ಲರಿಗೂ ಅನ್ವಯಿಸಬೇಕಲ್ಲವೇ? ಈಗ ಇನ್ನೊಂದಕ್ಕೆ ಟೆಂಡರನ್ನು ರದ್ದು ಪಡಿಸುತ್ತಾರೆ. .....

(ಗೊಂದಲ)